(ಕಾಂಗ್ರೆಸ್ ಹಾಗೂ ಜೆ.ಡಿ.ಎಸ್. ಶಾಸಕಾಂಗ ಪಕ್ಷದ ಶಾಸಕರು ಧರಣಿಯನ್ನು ಮುಕ್ತಾಯಗೊಳಿಸಿ ತಮ್ಮ ತಮ್ಮ ಸ್ಥಾನಗಳಿಗೆ ವಾಪಸ್ಸಾದರು).

ಶ್ರೀ ಸಿದ್ದರಾಮಯ್ಯ: ನಾವು ಅವರ ತರಹ behave ಮಾಡುವುದು ಬೇಡ ಬನ್ನಿ. Democratic ಆಗಿ ನಾವು ಬಿಹೇವ್ ಮಾಡುತ್ತೇವೆ. ಸಂವಿಧಾನದಲ್ಲಿ, ಪ್ರಜಾ ತಂತ್ರದಲ್ಲಿ ನಂಬಿಕೆ ಇಟ್ಟುಕೊಂಡಿರುವವರು ನಾವು. ನಿಮಗೆ ಪ್ರಜಾ ತಂತ್ರದಲ್ಲಿಯೂ ನಂಬಿಕೆ ಇಲ್ಲ. ಸಂವಿಧಾನದ ಮೇಲೆಯೂ ನಂಬಿಕೆ ಇಲ್ಲ, ನಿಯಮಾವಳಿಗಳ ಮೇಲೆಯೂ ನಂಬಿಕೆ ಇಲ್ಲ. ಇವರು ಯಾವುದರಲ್ಲಿ ನಂಬಿಕೆ ಇಟ್ಟುಕೊಂಡಿದ್ದಾರೆ ನಮಗೆ ಗೊತ್ತಿಲ್ಲ.

ಅಧ್ಯಕ್ಷರು: ಮಾನ್ಯ ರೇವಣ್ಣರವರು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ನಿಯ 60ರ ಅಡಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ನಾವು ಎಲ್ಲಾ ಒಟ್ಟಿಗೆ ನಿಲುವಳಿ ಸೂಚನೆ ತಂದಿದ್ದೇವೆ. ನಮ್ಮ ಕಾನೂನು ಮಂತ್ರಿಗಳು ಕಾನೂನನ್ನು ಹೇಳುತ್ತಿದ್ದಾರೆ. ಅವರು ನಿಯಮ 60ರ ಅಡಿಯಲ್ಲಿ ರೀಸೆಂಟ್ ವಿಷಯ ಬರುವುದಿಲ್ಲ ಎನ್ನುವ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ನಾನು ಕಾನೂನು ಮಂತ್ರಿಗಳಲ್ಲಿ ಮನವಿ ಮಾಡುವುದು ಇಷ್ಟೆ. ಕಳೆದ ಒಂದು ವಾರದಿಂದ ರಾಜ್ಯದ ಮುಖ್ಯಮಂತ್ರಿಗಳೇ ಪತ್ರಿಕೆಗಳಲ್ಲಿ ಹೇಳಿದ್ದಾರೆ. ವಿಧಾನಸಭೆಯಲ್ಲಿ ಬನ್ನಿ ಎಷ್ಟು ಇದೆಯೋ ಚರ್ಚೆ ಮಾಡೋಣ ಎಂದು ಮಾನ್ಯ ಮುಖ್ಯಮಂತ್ರಿಗಳೇ ಹೇಳಿರುವಾಗ ಕಾನೂನಿನ ಬಗ್ಗೆ ಏಕೆ ತಲೆ ಕೆಡಿಸಿಕೊಳ್ಳಬೇಕು, ನಿಯಮ ಏಕೆ ಬೇಕು? ನಿಯಮ ತೆಗೆಯಿರಿ. ರಾಜ್ಯದ 5 ಕೋಟಿ ಜನರ ಹಣ ಲೂಟಿ ಆಗುತ್ತಿದೆ. 5 ಕೋಟಿ ಜನರ ಹಣ ಲೂಟಿ ಆಗಿರುವುದನ್ನು ಚರ್ಚೆ ಮಾಡಿರುವುದಕ್ಕೆ ಏಕೆ ಹೆದರಬೇಕು? ನಿಯಮಾವಳಿ ಏತಕ್ಕೆ ಬೇಕು? ಕಾನೂನು ಮಂತ್ರಿಗಳು ನಿಯಮ 60ರ ಅಡಿಯಲ್ಲಿ ಚರ್ಚೆಗೆ ಬರುವುದಿಲ್ಲ ಎನ್ನುವುದಾದರೆ, ಕುಳಿತು ಚರ್ಚೆ ಮಾಡಿ ಯಾವುದು ಇದ್ದರೇನಂತೆ? ಮಾನ್ಯ ಮುಖ್ಯ ಮಂತ್ರಿಗಳೇ

ತಯಾರಿರುವಾಗ ಕಾನೂನು ಮಂತ್ರಿಗಳ ರಕ್ಷಣೆ ಏಕೆ ಬೇಕು? ಮಾನ್ಯ ಜಯಚಂದ್ರರವರು ಹೇಳಿದರು, ಕಾನೂನಿನಲ್ಲಿ ನಿಯಮ 60ರ ಅಡಿಯಲ್ಲಿ ರೀಸೆಂಟ್ ವಿಷಯ ಅಂದರು. ಯಾವ ಅಡಿ ಆದರೇನು ಚರ್ಚೆ ಮಾಡಿ. ಚರ್ಚೆ ಮಾಡುವುದಕ್ಕೇನು? ವಿಧಾನಸೌಧಕ್ಕೆ ಬರಲಿ ನಾವು ಚರ್ಚೆ ಮಾಡುವುದಕ್ಕೆ ತಯರಿದ್ದೇವೆಂದು ಹೇಳುತ್ತಾರೆ. ವಿಧಾನ ಸಭೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಗೆ ಕೊಟ್ಟರೆ ಏಕೆ ಹೆದರಬೇಕು? ನಿಮ್ಮ ಬಳಿ ನಾವು ಕಲಿಯಬೇಕಾಗಿಲ್ಲ ಕುಳಿತುಕೊಳ್ಳಿ. ಮಾನ್ಯ ಅಧ್ಯಕ್ಷರೆ, ದಯಮಾಡಿ ಅವರಿಗೆ ಹೇಳಿ. ಮಾನ್ಯ ಸಭಾ ನಾಯಕರಿಗೆ ಹೇಳಿ ಅವರ ಸದಸ್ಯರನ್ನು ಸ್ವಲ್ಪ ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಹೇಳಿ. ಇವರ ಹತ್ತಿರವೇನು ನಾವು ಕಲಿಯಬೇಕಾಗಿಲ್ಲ. ಮಾನ್ಯ ಅಧ್ಯಕ್ಷರೆ, ನೀವು ದಯಮಾಡಿ ಸಭಾನಾಯಕರಿಗೆ ಹೇಳಬೇಕು. ಅವರ ಸದಸ್ಯರಿಗೆ ಡೀಸೆನ್ಸಿ ಕಲಿಯುವುದಕ್ಕೆ ಹೇಳಿ.

ಶ್ರೀ ಬಂಡೆಪ್ಪ ಕಾಶಂಪೂರ್: ಅವರಿಗೆ ಕೂರಿಸಿ ಇಲ್ಲವೇ ಹೊರಗಡೆ ಹಾಕಿ.

ಅಧ್ಯಕ್ಷರು: ಯಾವುದೂ ದಾಖಲೆಗೆ ಹೋಗುವುದಿಲ್ಲ. ನೀವು ಎಷ್ಟು ಹೊತ್ತು ಮಾತನಾಡಿದರೂ ಯಾವುದೂ ದಾಖಲೆಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ನೀವು ಹೇಳಿದ್ದು ಯಾವುದೂ ಕಡತಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರುಗಳು ಸದನದಲ್ಲಿ ಈ ಸದನದ ಸದಸ್ಯರು ಅಲ್ಲದವರ ಹೆಸರುಗಳನ್ನು ಪ್ರಸ್ತಾಪಿಸಿದ್ದಾರೆ. xxxx xxxx xxxx xxxx xxxx ಅವರ ಹೆಸರುಗಳನ್ನು ಪ್ರಸ್ತಾಪಿಸಿರುವುದನ್ನು ಕಡತದಿಂದ ತೆಗೆದು ಹಾಕಲಾಗಿದೆ. ನೀವು ನೀವೇ ಮಾತನಾಡಿದರೆ ಹೇಗೆ? ಯಾವುದೂ ಕಡತಕ್ಕೆ ಹೋಗುವುದಿಲ್ಲ. Please ಸಿದ್ದು ಅವರೇ ಕುಳಿತುಕೊಳ್ಳಿ. I allowed him. ನೀವು ಏಕೆ ಮಾತನಾಡುತ್ತೀರಿ? ನಾನು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. Please, Please, Suresh Please. ನೀವು ಮಾತನಾಡಿ. Please, Please, ಅವರನ್ನು ಕಂಟ್ರೋಲ್ ಮಾಡಿದಾಗ ಮತ್ತೆ ನೀವು ಎದ್ದರೆ ಏನು ಮಾಡಬೇಕು? ಕುಳಿತುಕೊಳ್ಳಿ. Please, Please.

---

xxxx ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

12.10 ಪಿಎಂ

ಶ್ರೀ ಹೆಚ್.ಡಿ. ರೇವಣ್ಣ: ನಿಮ್ಮ ಹತ್ತಿರ ಕಲಿತುಕೊಳ್ಳಬೇಕಾಗಿಲ್ಲ ಕುಳಿತುಕೊಳ್ಳಿ. ನನಗೆ ಮಾನ ಮರ್ಯಾದೆ ಇದೆ ನಾನು ಕುಳಿತುಕೊಳ್ಳುತ್ತೇನೆ. ಆ ಸದಸ್ಯರಿಗೆ ಮಾನ ಮರ್ಯಾದೆ ಇದೆಯೇ ಕೇಳಿ.

ಶ್ರೀ ಸಿದ್ದರಾಮಯ್ಯ: ಅವರ ಉದ್ದೇಶ ಸ್ಪಷ್ಟವಾಗುತ್ತಿದೆ. ನಾವು ಯಾರೂ ಮಾತನಾಡಬಾರದು ಎಂದು ಇವರು ಮಾತನಾಡಿಕೊಂಡು ಬಂದು ಗಲಾಟೆ ಮಾಡುತ್ತಿದ್ದಾರೆ. This is too much. ನಿಮ್ಮ ಮಾತಿಗೂ ಅವರು ಮರ್ಯಾದೆ ಕೊಡುತ್ತಿಲ್ಲ.

ಅಧ್ಯಕ್ಷರು: Please ಚಂದ್ರಪ್ಪ ಕುಳಿತುಕೊಳ್ಳಿ. ಹೆಸರು ಹೇಳಬೇಕಾಗುತ್ತದೆ ಅಷ್ಟೆ. ನೀವು ಕುಳಿತುಕೊಳ್ಳದೆ ಹೋದರೆ I will name you. ವಿಶ್ವನಾಥ್‌ರವರೆ, ಕುಳಿತುಕೊಳ್ಳಿ. ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಡಿ.ಕೆ. ಶಿವಕುಮಾರ್: 6–7 ಮಂತ್ರಿ ಸ್ಥಾನ ಖಾಲಿ ಇದೆ. ಮಾನ್ಯ ಮುಖ್ಯಮಂತ್ರಿಗಳಿದ್ದಾರೆ ಎಲ್ಲರೂ ಯಾರು ಗಲಾಟೆ ಜಾಸ್ತಿ ಮಾಡುತ್ತೇವೆಂದು ನೋಡುತ್ತಿದ್ದಾರೆ. ಎಲ್ಲರೂ ಮಂತ್ರಿ ಸ್ಥಾನ ಸಿಗುತ್ತದೆ ಎಂದು ಗಲಾಟೆ ಮಾಡುತ್ತಿದ್ದಾರೆ.

ಅಧ್ಯಕ್ಷರು: ಮಾನ್ಯ ರೇವಣ್ಣರವರೆ ಮಾತನಾಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಅವರಿಗೆ ಮೊದಲು ಕೂರಿಸಿ. ನಿಮ್ಮ ಕೈಯಲ್ಲಿ ಅವರಿಗೆ ಕೂರಿಸುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ.

ಅಧ್ಯಕ್ಷರು: ನೀವು ಕುಳಿತುಕೊಳ್ಳಿ. ಇದು ಸರಿಯಾದ ವರ್ತನೆಯಲ್ಲ. ಕುಳಿತುಕೊಳ್ಳಿ ಎಂದ ತಕ್ಷಣ ಕುಳಿತುಕೊಳ್ಳಬೇಕು. ಸಿದ್ದುರವರೆ, ನಿಮಗೆ ಎಷ್ಟು ಸಲ ಹೇಳಬೆಕು ಹೇಳಿ. ಚಂದ್ರಪ್ಪನವರೆ, ನೀವೂ ಕುಳಿತುಕೊಳ್ಳಿ. ವರದಿಗಾರರೆ, ಈಗ ಯಾವುದನ್ನೂ ದಾಖಲೆಗೆ ತೆಗೆದುಕೊಳ್ಳಬೇಡಿ.

(ಗೊಂದಲ)

ಅಧ್ಯಕ್ಷರು: ನಿಮಗೆ ಎಷ್ಟು ಹೇಳಿದರೂ ಕೇಳದಿದ್ದರೆ, ನಿಮ್ಮ ಹೆಸರು ಹೇಳಿ ಹೊರಗಡೆ ಹಾಕಬೇಕಾಗುತ್ತದಷ್ಟೆ. ಅದಕ್ಕೆ ಅವಕಾಶ ಮಾಡಿಕೊಡಬೇಡಿ. ದಯವಿಟ್ಟು ಕುಳಿತುಕೊಳ್ಳಿ. ಎಷ್ಟು ಸಲ ನಿಮಗೆ ಕುಳಿತುಕೊಳ್ಳಿ ಎಂದು ಹೇಳುವುದು. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಬೇರೆಯವರಿಗೂ ಅದನ್ನೇ ನಾನು ಹೇಳುತ್ತಿದ್ದೇನೆ. ನಿಮಗೇನೂ ಪ್ರತ್ಯೇಕವಾಗಿ ಹೇಳಬೇಕೆ? ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಎಷ್ಟು ಹೇಳಿದರೂ ಕುಳಿತುಕೊಳ್ಳುವುದಿಲ್ಲವೆಂದರೆ, ನಾನು ಅಂಥವರ ಹೆಸರು ಹೇಳಿ ಹೊರಗೆ ಹಾಕಿಸಬೇಕಾಗುತ್ತದಷ್ಟೆ. Please sit. Otherwise, I will name you. ಮಾನ್ಯ ರೇವಣ್ಣನವರೆ, ತಾವು ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ಬೇಕಾದರೆ ಮುಖ್ಯಮಂತ್ರಿಗಳಿಗೆ ಈ ಸದನದ ಮುಖೇನ ಕೇಳುತ್ತೇನೆ. From beginning. ನಾವು ರಾಜಕೀಯಕ್ಕೆ ಬಂದ ದಿವಸದಿಂದ ನಡೆದಿರುವ ಬಗ್ಗೆ ಏನು ಬೇಕಾದರೂ ಅವರು ತನಿಖೆ ಮಾಡಿಸಲಿ. ಅದನ್ನು ಬಿಟ್ಟು ಹೀಗೆ ಹಿಂದುಗಡೆ ಬಾಗಿಲಿನಿಂದ ಈ ರೀತಿ ಮಾಡಿಸಿದರೆ ಹೇಗೆ? ನಾವೇನೂ ಹೆದರಿಕೊಂಡು ಓಡಿ ಹೋಗುವುದಿಲ್ಲ. ತನಿಖೆ ಮಾಡಿಸುವುದಕ್ಕೆ ತಾಕತ್ತು ಇದೆಯೇ ಕೇಳಿ. ಹಿಂದುಗಡೆಯಿಂದ ಪಾಪ ಇವರ ಕಡೆಯಿಂದ ನಾವು ಹೇಳಿಸಿಕೊಳ್ಳಬೇಕೆ?

ಅಧ್ಯಕ್ಷರು: ಈ ವಿಷಯಕ್ಕೆ ಸಂಬಂಧಿಸಿದಂತೆ how it will come under Rule 60 ಎಂದು ಅಷ್ಟನ್ನು ಹೇಳಿ. ನೀವು ವಿಷಯಾಂತರ ಮಾಡಬೇಡಿ. ನೀವು ಹೇಳಬೇಕಾದ್ದನ್ನು ಸ್ಪೆಸಿಫಿಕ್ ಆಗಿ ಹೇಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಸ್ವಲ್ಪ ಡೀಸೆನ್ಸಿ ಕಲಿತುಕೊಳ್ಳಿ ಎಂದು ಅವರ ಕಡೆಯಿಂದ ಆ ಮೆಂಬರ್ಸ್‌ಗಳಿಗೆ ಹೇಳಿ. ನಿಮ್ಮ ಕೈಯಲ್ಲಿ ಅವರನ್ನು ಕಂಟ್ರೋಲ್ ಮಾಡುವುದಕ್ಕೆ ನಿಮಗೆ ಆಗುತ್ತದೆಯೋ, ಇಲ್ಲವೋ ಹೇಳಿ.

ಅಧ್ಯಕ್ಷರು: ನೀವೂ ಕೂಡ ವಿಷಯಾಂತರ ಮಾಡುವುದು ಬೇಡ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಇದೇ ರೀತಿಯಲ್ಲಿಯೇ ಮಾತನಾಡಬೇಕು ಎಂದರೆ ಹೇಗಾಗುತ್ತದೆ ಹೇಳಿ.

ಅಧ್ಯಕ್ಷರು: ನಾನು ಆ ರೀತಿ ಹೇಳಿಲ್ಲ. We are in the preliminary stage. Preliminary Stageನಲ್ಲಿ ಇದ್ದೇವೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವಾಗ ಕೂಡ ಅವರ ಕಡೆಯ ಅಷ್ಟೊಂದು ಸದಸ್ಯರು ಎದ್ದು ಬಿಟ್ಟರು. ಗಲಾಟೆಯಿಲ್ಲದಿದ್ದರೆ ಇಷ್ಟೊತ್ತಿಗೆ ನೀವು ನಿಮ್ಮ ತೀರ್ಮಾನವನ್ನು ಕೊಟ್ಟು ಬಿಡುತ್ತಿದ್ದೀರಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಸ್ವಲ್ಪ ಡೀಸೆನ್ಸಿ ಕಲಿತುಕೊಳ್ಳಿ ಎಂದು ನೀವು ಅವರಿಗೆ ಹೇಳಿ. ನಿಮಗೆ ಅವರನ್ನು ಕಂಟ್ರೋಲ್ ಮಾಡುವುದಕ್ಕೆ ಆಗುತ್ತದೆಯೋ, ಇಲ್ಲವೋ ಹೇಳಿ. ನಾವು ಬೇಕಾದರೆ ಎದ್ದು ಹೋಗುತ್ತೇವೆ. ವಿರೋಧ ಪಕ್ಷದ ಸದಸ್ಯರು ಮಾತನಾಡುವುದೇ ಬೇಡವೆಂದರೆ ಹೇಳಿ. ಅವರೂ ಬೇಕಾದರೆ ನೋಟಿಸ್ ಕೊಟ್ಟು ಅವಕಾಶ ಪಡೆದು ಮಾತನಾಡಲಿ.

ಅಧ್ಯಕ್ಷರು: ನೀವು ರೂಲ್ 60 ರೊಳಗೆ ಏನು ಬರುತ್ತದೆ ಎಂದು ಹೇಳಿ. ಬೇರೆ ಸದಸ್ಯರು ಕುಳಿತುಕೊಳ್ಳಿ. ನಿಮಗೆ ಎಷ್ಟು ಸಾರಿ ಹೇಳುವುದು. ರೇವಣ್ಣನವರೆ, ನೀವು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಿಯಮ 60ರಡಿಯಲ್ಲಿ ಚರ್ಚೆ ಮಾಡುವುದಕ್ಕೆ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಣ್ಣನವರು ನೋಟಿಸ್ ಕೊಟ್ಟಿದ್ದಾರೆ ಮತ್ತು ನಮ್ಮ ಪಕ್ಷದಿಂದಲೂ ಕೂಡ ನೋಟಿಸ್ ಕೊಟ್ಟಿದ್ದೇವೆ. ಈ ರಾಜ್ಯದ 5 ಕೋಟಿ ಸಾರ್ವಜನಿಕರ ಹಣವನ್ನು ಯಾರೇ ಲೂಟಿ ಮಾಡಿರಲಿ ಅಥವಾ ನಾನೇ ಮಾಡಿರಲಿ.......

(ಗೊಂದಲ)

ಅಧ್ಯಕ್ಷರು: ಪ್ಲೀಸ್, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳೆ ಒಂದು ಕಡೆ ಚರ್ಚೆಗೆ ನಾನು ಸಿದ್ಧನಿದ್ದೇನೆಂದು ಹೇಳಿದ್ದಾರೆ. ಈಗ ಚರ್ಚೆ ಮಾಡಿ, ಯಾರು ಬೇಡವೆಂದು ನಾವು ನಿಮ್ಮನ್ನು ಹಿಡಿದುಕೊಂಡಿದ್ದೇವೆಯೇ? ಚರ್ಚೆ ಮಾಡುವುದಕ್ಕೆ ಇವರು ಬಿಡದಿದ್ದರೆ, ಮಾನ್ಯ ಕಾನೂನು ಮಂತ್ರಿಗಳು ಈ ರಾಜ್ಯದಲ್ಲಿ ಲೂಟಿ ಆಗುತ್ತಿರುವುದಕ್ಕೆ, ಅವರೇ ಅವಕಾಶ ಕೊಡುತ್ತಿದ್ದಾರೆಂದು ನಾವು ಬೇಕಾದರೆ ಇಂದು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು: ಅದನ್ನೆಲ್ಲಾ ನೀವು ಹೇಳಬೇಡಿ. ರೂಲ್ 60ರಡಿಯಲ್ಲಿ ಸ್ಪೆಸಿಫಿಕ್ ಆಗಿ ಹೇಗೆ ಬರುತ್ತದೆ ಅಷ್ಟನ್ನು ಮಾತ್ರ ಹೇಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮುಖ್ಯಮಂತ್ರಿಗಳೆ ಹೇಳಿಲ್ಲವೆ? ಮುಖ್ಯಮಂತ್ರಿಗಳೆ ಹೇಳಿಲ್ಲವೆ? ನಾನಲ್ಲ ಹೇಳಿರುವುದು. ಮಾನ್ಯ ಮುಖ್ಯಮಂತ್ರಿಗಳೆ ಹೇಳಿರುವುದು, ವಿಧಾನಸಭೆಯೊಳಗೆ ಬನ್ನಿ, ಚರ್ಚೆ ಮಾಡುವುದಕ್ಕೆ ಬನ್ನಿ, ನಾನು ರೆಡಿ ಇದ್ದೇನೆಂದು ಹೇಳಿರುವುದು. ನಾವಲ್ಲ, ನಿಮ್ಮ ಮುಖ್ಯಮಂತ್ರಿಗಳೇ ಹೇಳಿರುವುದು.

ಅಧ್ಯಕ್ಷರು: ಯಾವ ಕ್ರಮದಲ್ಲಿ ಚರ್ಚೆ ಮಾಡಬೇಕೋ ಆ ರೀತಿ ಮಾಡೋಣ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡುವುದಕ್ಕೆ ನಾವು ವಿರೋಧ ವ್ಯಕ್ತಪಡಿಸಿಲ್ಲ. ಆದರೆ ನಿವು ರೂಲ್ 60 ರಡಿಯಲ್ಲಿ ತಂದಾಗ ನನ್ನ ಕರ್ತವ್ಯವನ್ನು ನಾನು ಮಾಡಲೇಬೇಕಾಗುತ್ತದೆ. ಈಗ ರೂಲ್ 60ರಲ್ಲಿ ಏನು ಹೇಳಲಾಗಿದೆಯೆಂದರೆ, "Subject to the provisions of these rules a motion for adjournment of the business of the House, for the purpose of discussing a definite matter of urgent public importance may be made with the consent of the Speaker" ಎಂದು ಹೇಳಲಾಗಿದೆ ಸ್ವಾಮಿ. ಈಗ ಸುಭಾಷ್ ಕಶ್ಯಪ್‌ರವರು ಬರೆದಿರುವುದರಲ್ಲಿ ಬಹಳ ಸ್ಪಷ್ಟವಾಗಿ ಇದರ ಬಗ್ಗೆ ಹೇಳಲಾಗಿದೆ. ಅದೇನೆಂದರೆ, "For the purpose of this rule, a matter to be definite, urgent and of public importance, must have arisen suddenly in the manner of emergency and should not have arisen over a series of weeks" ಎಂದು ಹೇಳಲಾಗಿದೆ. ಆದರೆ ಇವರು ಏನು ಹೇಳಿದ್ದಾರೆಂದರೆ, ಅವ್ಯಾಹತವಾಗಿ, ಅವ್ಯಾಹತವಾಗಿ ಸರ್ಕಾರ ಬಂದ ದಿನದಿಂದಲೂ ಎಂದಿದ್ದಾರೆ, ಅದು ಯಾವ ರೀತಿ definite, urgent and of public importance ಎಂದು ಅವರು ಹೇಳಲಿ ಸ್ವಾಮಿ. ನಾನು ಚರ್ಚೆ ಮಾಡುವುದು ಬೇಡವೆಂದು ಹೇಳಿಲ್ಲ.

Mr. Speaker: Is it a definite allegation? ಅದನ್ನು convince ಮಾಡಿ.

ಶ್ರೀ ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಆದರೆ ಚರ್ಚೆಗೆ ನಿಯಮ 60ರಡಿಯಲ್ಲಿ ಅವರು ತರುತ್ತಿರುವ ಬಗ್ಗೆ ನನ್ನ ವಿರೋಧವನ್ನು ಈ point of order ಮುಖಾಂತರ ತಿಳಿಸಿದ್ದೇನೆ. ಇನ್ನು ಇದರ ಬಗ್ಗೆ ರೂಲಿಂಗ್ ಏನು ಕೊಡುತ್ತಾರೋ ಅದು ಸ್ಪೀಕರ್‌ಗೆ ಬಿಟ್ಟ ವಿಷಯ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಪದೇ ಪದೇ ನಮ್ಮ ಸಂಸದೀಯ ಸಚಿವರು ಅನಗತ್ಯವಾಗಿ ಗೊಂದಲ ನಿರ್ಮಾಣ ಮಾಡುತ್ತಿದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್: I don't agree. ಅನಗತ್ಯ ಎಂದರೆ ಏನರ್ಥ? I am doing my duty. ನಾನು ಹೇಳಲಾ? ಇವರು ಅನಗತ್ಯವಾಗಿ adjournment motion ತಂದಿದ್ದಾರೆಂದು ನಾನು ಹೇಳಲೆ? ರಾಜ್ಯಪಾಲರ

ಭಾಷಣದ ಮೇಲೆ ಚರ್ಚೆ ಇದ್ದಾಗ ಅನಗತ್ಯವಾಗಿ ಇವರು adjournment motion ತಂದಿದ್ದಾರೆಂದು ನಾನು ಹೇಳಲೆ? How can he say that?

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಕೌಲ್ ಅಂಡ್ ಶಕ್ದರ್‌ನಲ್ಲಿ ಹೇಳಿರುವುದನ್ನು ನಾವು ಹೆಚ್ಚು ಫಾಲೋ ಮಾಡುತ್ತಿರುತ್ತೇವೆ. Adjournment Motion ಯಾವಾಗ admissible ಎನ್ನುವುದನ್ನೂ ಕೂಡ ಬಹಳ ಸ್ಪಷ್ಟವಾಗಿ ಅದರಲ್ಲಿ ಹೇಳಲಾಗಿದೆ. 533ನೇ ಪುಟದಲ್ಲಿ ಏನು ಹೇಳಲಾಗಿದೆಯೆದರೆ, "An adjournment motion to be admissible must possess the following essential elements. Ministerial responsibility ಎಂದು ಹೇಳುತ್ತಾ ಮುಂದಕ್ಕೆ ಏನು ಹೇಳಿದ್ದಾರೆಂದರೆ, generally speaking, the subject matter of an adjournment motion must have direct or indirect relation to the conduct or default on the part of Government of India, relation to the conduct, direct or indirect relation to the conduct, or default on the part of the Government of India, ಇಲ್ಲಿ ಕರ್ನಾಟಕ and must be in the nature of criticism of the action of the Government of India, either for having done some action or having omitted to do so some action". It is very very clear ಮಾನ್ಯ ಅಧ್ಯಕ್ಷರೆ. ನಾವು ತಂದಿರುವುದು ಕೂಡ corruption is the main issue. That is the only issue. This has recently occurred. That has also been fulfilled. Public importance. That has also been fulfilled. What more is required? If such being the case, ನಾವು ಈ ರೀತಿ ಹೇಳಿದರೂ ಕೂಡ ಪದೇ ಪದೇ ಕಾನೂನು ಸಚಿವರು ಅದು ಬರುವುದಿಲ್ಲ, ಅದು ಬರುವುದಿಲ್ಲವೆಂದು ಹೇಳುತ್ತಾ ರೂಲಿಂಗ್ ಕೊಡಿ ಎಂದು ಹೇಳುತ್ತಲೇ ಇದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಅವರು ಹೇಳಿದ ತಕ್ಷಣ ಅವರು ಹೇಳಿದ್ದೇ fulfill ಆಗುವುದಿಲ್ಲ. ಈಗ ಭ್ರಷ್ಟಾಚಾರ ಎನ್ನುವುದು ಇವರ issue. Ok. ಆದರೆ ಇವರು ಮಾಡುತ್ತಿರುವುದು ಯಾವಾಗ? Recent occurrence ಇದರಲ್ಲಿ ಏನಿದೆ? Specific issue ಇದರಲ್ಲಿ ಏನಿದೆ?

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ ನಾನು ಅದರ ಬಗ್ಗೆ ಹೇಳುತ್ತೇನೆ. "An adjournment motion is not admissible unless there is failure on the part of the Government in performing the duties enjoined by the

constitution and law." ನಾವು ನಮ್ಮ ರೂಲ್ 60ರಲ್ಲಿ ಹೇಳಿರತಕ್ಕಂಥದ್ದು corruption ಬಗ್ಗೆ ಇವರು ಬಂದ ಮೇಲೆ corruption ಅವ್ಯಾಹತವಾಗಿ ನಡೆಯುತ್ತಿದೆ, ಅವ್ಯಾಹತವಾಗಿ ಇವರು ಬಂದ ದಿನದಿಂದಲೂ ನಡೆಯುತ್ತಿದೆ.

ಅಧ್ಯಕ್ಷರು: ಅವರು ಮಾತನಾಡುತ್ತಿರುವಾಗ ಹೀಗೆ ಮಧ್ಯೆ ಮಧ್ಯೆ ಏಕೆ ಬೇರೆಯವರು ಎದ್ದು ನಿಲ್ಲುತ್ತೀರಿ? ಅವರು ಏನು ಹೇಳುತ್ತಾರೋ ಅದನ್ನು ಕೇಳುವಷ್ಟು ತಾಳ್ಮೆ ಇರಬೇಕು. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. I will give decision.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಭೂ ಹಗರಣಗಳಿಂದ ಭ್ರಷ್ಟಾಚಾರ, ಸ್ವಜನ ಪಕ್ಷಪಾತದಿಂದ ಭ್ರಷ್ಟಾಚಾರ, ಹೀಗೆ ಭ್ರಷ್ಟಾಚಾರಗಳು ನಡೆಯುತ್ತಿವೆ. ಇದರ ಬಗ್ಗೆ ಚರ್ಚೆ ಮಾಡಬೇಕು. ಇದು ಸಾರ್ವಜನಿಕ ಹಿತಾದೃಷ್ಟಿಯಿಂದ ಬಹಳ ಮಹತ್ವವಾದ ವಿಚಾರ. ರಾಜ್ಯದ ಬೊಕ್ಕಸಕ್ಕೆ ಇದರಿಂದ ಸಾವಿರಾರು ಕೋಟಿ ರೂ.ಗಳ ನಷ್ಟವಾಗಿದೆ. ಇಂಥ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿದರೆ, ಅವರು ಮೊದಲೇ ತಯಾರು ಮಾಡಿಕೊಂಡು ಬಂದಿದ್ದಾರೆ, ಹೇಗಾದರೂ ಮಾಡಿ ಚರ್ಚೆ ಮಾಡುವುದನ್ನು ತಪ್ಪಿಸಬೇಕೆಂದು, ಇವರು ಮಾಡಿರುವುದೆಲ್ಲ ಇಡೀ ರಾಜ್ಯಕ್ಕೇ ಗೊತ್ತಾಗಿ ಬಿಡುತ್ತದೆ, ಇವರು ಮಾಡಿರತಕ್ಕಂಥ ಭ್ರಷ್ಟಾಚಾರ ಇಡೀ ಜಗತ್ತಿಗೇ ಗೊತ್ತಾಗಿ ಬಿಡುತ್ತದೆ, ವಿರೋಧ ಪಕ್ಷದವರು ಎಲ್ಲ ದಾಖಲಾತಿಗಳನ್ನು ಸದನದ ಮುಂದೆ ಇಟ್ಟು ಬಿಡುತ್ತಾರೆ. ಇದರಿಂದ ಎಲ್ಲವೂ ಗೊತ್ತಾಗಿ ಬಿಡುತ್ತದೆ ಎಂದು ಹೇಳಿ ಇವರು ನಮ್ಮನ್ನು ಮಾತನಾಡುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ದಯಮಾಡಿ ನೀವು ನಮ್ಮ ಕಡೆ ನೋಡಿ. ನೀವು ಅವರ ಕಡೆ ನೋಡಬೇಡಿ. ಅವರ ಕಡೆ ನೀವು ಸ್ವಲ್ಪ ಕೋಪದಿಂದ ನೋಡಿ. ನಮ್ಮ ಕಡೆ ಸ್ವಲ್ಪ ನಗುತ್ತಾ ನೋಡಿ. ಆಗ ಮಾತ್ರ ನಮಗೆ ನ್ಯಾಯ ಸಿಗುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಬಿಟ್ಟು ನೀವು ಅವರ ಕಡೆ ಸ್ವಲ್ಪ ನಗು ನಗುವುದಕ್ಕೆ ಶುರು ಮಾಡಿ ಬಿಟ್ಟರೆ ಅವರ ಕಡೆಯವರೆಲ್ಲರೂ ಎದ್ದು ನಿಂತ್ಕೊಂಡ್ಬಿಡ್ತಾರೆ. ದಯಮಾಡಿ ನೀವು ಆ ರೀತಿ ಮಾಡುವುದಕ್ಕೆ ಹೋಗಬೇಡಿ. ಅವರ ಕಡೆ ನೀವು ಕೋಪದಿಂದ ನೋಡಿದರೆ ಕುಳಿತುಕೊಳ್ಳುತ್ತಾರೆ. ನೋಡಿ. ಆ ಸಿದ್ದು ಸವದಿಯವರು 24 ಗಂಟೆ ಯಾವಾಗಲೂ ನಿಂತೇ ಇದ್ದಾರೆ. ಅವರು ಸದನದೊಳಗೆ ಬಂದಾಗಿನಿಂದ ಹಾಗೆಯೇ ನಿಂತಿದ್ದಾರೆ. ಅವರು ಹಾಗೆಯೇ ನಿಂತೇ ಇರುವುದೇ?

ಅಧ್ಯಕ್ಷರು: ಸಿದ್ದು ಸವದಿಯವರೆ, ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ಅವರನ್ನು ಹೊರಗಾದರೂ ಹಾಕಬೇಕು.

(ಗೊಂದಲ)

ಅಧ್ಯಕ್ಷರು: Please ಕುಳಿತುಕೊಳ್ಳಿ.

(ಗೊಂದಲ)

ಶ್ರೀ ನೆ.ಲ. ನರೇಂದ್ರಬಾಬು: ಜನ ಸದನದಲ್ಲಿ ಚರ್ಚೆ ಮಾಡಿ ಎಂದು ಹೇಳುತ್ತಾರೆ.

(ಗೊಂದಲ)

ಅಧ್ಯಕ್ಷರು: ಯಾವುದೂ ದಾಖಲೆಗೆ ತೆಗೆದುಕೊಳ್ಳಬೇಡಿ.

ಶ್ರೀ ನೆ.ಲ. ನರೇಂದ್ರಬಾಬು: ಚರ್ಚೆ ಮಾಡೋಣ, ಅದನ್ನು ಧೈರ್ಯವಾಗಿ ಒಪ್ಪಿಕೊಳ್ಳಿ, ಅದು ಗಂಡಸುತನ. ಚರ್ಚೆ ಮಾಡುವುದಕ್ಕೆ ನಿಮ್ಮಲ್ಲಿ ದಾಖಲೆ ಇದ್ದರೆ ಮಾತನಾಡಿ, ಅದು ಬಿಟ್ಟು ಹಾಗೆ ಎದ್ದು ನಿಂತುಕೊಳ್ಳುವುದಲ್ಲ.

(ಗೊಂದಲ)

ಅಧ್ಯಕ್ಷರು: Please ಕುಳಿತುಕೊಳ್ಳಿ. ಸಿದ್ದು ಅವರೆ, ಚಂದ್ರಪ್ಪ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಸಿದ್ದುರವರೆ, ಆಗಾಗ ಎದ್ದು ನಿಂತುಕೊಳ್ಳುವುದು ಸರಿಯಲ್ಲ. Please ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದುಸವದಿ: ದಯವಿಟ್ಟು ಮಾತನಾಡಿ, ಏನಿದೆ ಎಂದು ಹೇಳಿ.

ಅಧ್ಯಕ್ಷರು: ಈ ರೀತಿ ಎದ್ದರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಈಗ recent ಆಗಿ ಎರಡೂವರೆ ವರ್ಷದಲ್ಲಿ ನಡೆದಿರುವಂತಃ ಘಟನೆ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು: ಎರಡೂವರೆ ವರ್ಷದ ಘಟನೆ ಎಂದರೆ recent ಎಂದು ಹೇಳುತ್ತಾರಾ?

ಶ್ರೀ ಹೆಚ್.ಡಿ. ರೇವಣ್ಣ: ನಮ್ಮ ಕಾನೂನು ಮಂತ್ರಿಗಳು ಎರಡೂವರೆ ವರ್ಷದ ಘಟನೆ ಎಂದು...

ಅಧ್ಯಕ್ಷರು: ಎರಡೂವರೆ ವರ್ಷದ ಘಟನೆ ಎಂದರೆ recent ಎಂದು ಹೇಳುತ್ತಾರೆ, ಹೇಗೆ ಆಗುತ್ತದೆ?

ಶ್ರೀ ಹೆಚ್.ಡಿ. ರೇವಣ್ಣ: xxx xxx xxx

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಇದು recent ಆಗಿ ಹೇಳಿರುವುದು.

(ಗೊಂದಲ)

ಶ್ರೀ ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಅವರು ಹೇಳಿರುವುದನ್ನು can it be allowed?

Mr. Speaker: Cannot be.

ಶ್ರೀ ಎಸ್. ಸುರೇಶ್ ಕುಮಾರ್: ದಯವಿಟ್ಟು ವಾಪಸ್ಸು ತೆಗೆಸಿ.

ಅಧ್ಯಕ್ಷರು: ಅದನ್ನು ಕಡತದಿಂದ ತೆಗೆಸಿ ಹಾಕುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್: ಅವರು ಏನಾದರೂ ಹೇಳಿಕೊಂಡು ಹೋಗಬಹುದೇ?

(ಗೊಂದಲ)

ಅಧ್ಯಕ್ಷರು: ಕುಳಿತುಕೊಳ್ಳಿ, I will give ruling.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಮಂತ್ರಿಗಳು ಬೇಕಾದರೆ ಹೇಳಲಿ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರಾದ...

ಶ್ರೀ ಸಿದ್ದರಾಮಯ್ಯ: ತಾವು ಏನು ರೂಲಿಂಗ್ ಕೊಡುತ್ತಿದ್ದೀರಾ?

ಅಧ್ಯಕ್ಷರು: ತಾವು ಹೇಳಿ, ಯಾರೂ ಅವಕಾಶವನ್ನೇ... ಕುಳಿತುಕೊಳ್ಳಿ ಎರಡೂವರೆ ವರ್ಷದ್ದು recent occurrence ಎಂದರೆ ನಾನು how to come to conclusion.

ಶ್ರೀ ಹೆಚ್.ಡಿ. ರೇವಣ್ಣ: Recent ಆಗಿ ಅವರೇ ಹೇಳಿದರಲ್ಲ ಸಾರ್.

ಅಧ್ಯಕ್ಷರು: ಎರಡೂವರೆ ವರ್ಷ ಎಂದರೆ how can it be recent.

ಶ್ರೀ ಹೆಚ್.ಡಿ. ರೇವಣ್ಣ: ನಂಜುಂಡೇಶ್ವರನ ಆಣೆ ಇನ್ನು ಮುಂದೆ ಮಾಡುವುದಿಲ್ಲವೆಂದು ಹೇಳಿದ್ದಾರೆ.

---

xxx ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಅಧ್ಯಕ್ಷರು: ಈಗ ರೇವಣ್ಣನವರೆ, ತಾವು recent ಎರಡೂವರೆ ವರ್ಷ ಎಂದು ಹೇಳಿದಿರಿ, ಎರಡೂವರೆ ವರ್ಷ recent ಎಂದು ಆಗುತ್ತದೆಯೇ? ಅದು ಹೇಗೆ ಅರ್ಥವಾಗುತ್ತದೆ? Recent ಎಂದರೆ ಎರಡೂವರೆ ವರ್ಷ ಎಂದು ಹೇಳಿರುವುದು Is it admissible?

Sri T.B. Jayachandra: It is a matter of public importance ಎನ್ನುವಂತಹ ಮಾತನ್ನು ಎಲ್ಲರೂ ಹೇಳುತ್ತಿದ್ದೇವೆ. ನಮ್ಮ ನಿಯಮಾವಳಿಯಲ್ಲಿ public importance...

ಅಧ್ಯಕ್ಷರು: ಅಲ್ಲ, importance of recent occurrence.

Sri T.B. Jayachandra: Yes, I will tell you.

Mr. Speaker: Where is it in your motion? Tell me. What is the recent occurrence?

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಕೇಳಿ matter must be of public importance, to be in order, an adjournment motion must raise...

ಅಧ್ಯಕ್ಷರು: ಅಲ್ಲ, those are all agreeable. Adjournment Motion, a recent occurrnece, a public importance.

ಶ್ರೀ ಟಿ.ಬಿ. ಜಯಚಂದ್ರ: ಒಂದು ನಿಮಿಷ ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ, answer ಇದೆ. To be in order an adjournment motion must raise a matter of sufficient public importance to warrant interruption of normal business of the House. No hard and fast rule can be laid down as to what causes a public importance, no hard and fast rule. The question of public importance is decided on merits in each individual cases. It is always a relative question, in the vast country like India the importance of an incident has t obe judged on the background of the entire administration of the country. Why the whole country is concerned is, the corruption is such an issue. Everyone talks of corruption and even in the party floors also, whether it is any party, it is discussed also. That is why it is a matter of public importance. ಏಕೆ ನಿಲುವಳಿ ಸೂಚನೆ ಎಂದರೆ.

Mr. Speaker: Specific and definite recent occurrence.

Sri T.B. Jayachandra: Corruption is a matter of public importance.

Mr. Speaker: Where is the specific allegation?

ಶ್ರೀ ಟಿ.ಬಿ. ಜಯಚಂದ್ರ: The whole country is seized of this matter.

(ಗೊಂದಲ)

Mr. Speaker: That is different. Where is the specific allegation?

ಶ್ರೀ ಟಿ.ಬಿ. ಜಯಚಂದ್ರ: ಯಾವತ್ತು ನಾವು ರೈಜ್ ಮಾಡಬೇಕು? ಸದನದ ಪ್ರಾರಂಭದ ದಿನದಂದು ಇದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆ.

ಅಧ್ಯಕ್ಷರು: ಚರ್ಚೆಗೆ ಬೇರೆ ಬೇರೆ ರೀತಿಯಲ್ಲಿ ಅವಕಾಶ ಇದೆ. Adjournment motion, it is a specific provision. specific provisionನಲ್ಲಿ the subject must be specific of recent occurrence, public importance everything, I am agreeable.

Sri T.B. Jayachandra: There is no hard and fast rule.

ಅಧ್ಯಕ್ಷರು: ಈ Basic ಎಲ್ಲಿದೆ? Where is the basic requirement? That is what I am asking.

Sri T.B. Jayachandra: Basis requirement is the public importance.

Mr. Speaker: You must allege in the motion.

ಶ್ರೀ ಟಿ.ಬಿ. ಜಯಚಂದ್ರ: ರಾಜ್ಯ, ದೇಶದಲ್ಲಿ ಎಲ್ಲರೂ...

Mr. Speaker: That is different.

ಶ್ರೀ ಟಿ.ಬಿ. ಜಯಚಂದ್ರ: ಕರ್ನಾಟಕದ ವಿಧಾನಸಭೆಯಲ್ಲಿ...

ಅಧ್ಯಕ್ಷರು: ಅದಕ್ಕೆ ಬೇರೆ ಬೇರೆ ರೀತಿಯಲ್ಲಿ ಚರ್ಚೆಗೆ ಅವಕಾಶ ಇದೆ.

ಶ್ರೀ ಟಿ.ಬಿ. ಜಯಚಂದ್ರ: ನೀವು Adjournment Motion ಮೂಲಕ ಚರ್ಚೆ ಮಾಡುವುದರಿಂದ ಹೆಚ್ಚಿನ ಘನತೆ ಬರುತ್ತದೆ, ಗೌರವ ಬರುತ್ತದೆ.

Mr.Speaker: Adjournment Motion, this is a special statute or provision.

ಶ್ರೀ ಟಿ.ಬಿ. ಜಯಚಂದ್ರ: ನೀವು ನ್ಯಾಯದ ತಕ್ಕಡಿಯ ಕೆಳಗೆ ಕುಳಿತಿದ್ದೀರಿ.

ಅಧ್ಯಕ್ಷರು: ನೀವು ನ್ಯಾಯದ ತಕ್ಕಡಿಯಲ್ಲಿ ಕುಳಿತಿದ್ದರೂ ಹೇಳುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ: ಇವತ್ತು ತಮ್ಮ ಪೀಠಕ್ಕೆ ಗೌರವ ಬರುತ್ತದೆ.

ಅಧ್ಯಕ್ಷರು: ನ್ಯಾಯದ ತಕ್ಕಡಿಯಲ್ಲಿ ಕುಳಿತಿರುವುದಕ್ಕೆ ಹೇಳುತ್ತಿದ್ದೇನೆ, ನ್ಯಾಯ ಹೇಗೆ ಎಂದರೆ Justice according to law.

Sri T.B. Jayachandra: Justice according to law only.

Mr. Speaker: Rules are laid down.

Sri T.B. Jayachandra: We are not exercising discretion.

Mr. Speaker: Yes, Discretion in accordance with the provisions of law. Discretion can be applied in accordance with the provisions of rules and regulations that are framed by us. Can I use whatever the discretion I have? no.

Sri T.B. Jayachandra: Entire country and how Karnataka Legislative Assembly behaves, when a matter comes like this ಎನ್ನತಕ್ಕಂಥದ್ದನ್ನು ಜನ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು: ಇದು ಬಹಳ ಸಿಂಪಲ್, ಚರ್ಚೆ ಯಾವುದರಲ್ಲಿ ಮಾಡಬಹುದು, ಈಗ Adjournment motion ಎನ್ನುವ special provision ಇರುವಾಗ what are the basic requirements? Basic requirements are recent occurrence, public importance and it must be specific and definite. Whether in your Motion or in this Petition, are there any specific, recent occurrence and definite incidents?

Sri T.B. Jayachandra: CEC report is a recent occurrence.

Mr.Speaker: No, no you read out your own petition, ತಾವು ಓದಿ, ಅದನ್ನು ಹೇಳಿದ್ದೀರಿ.

Sri T.B. Jayachandra: Lokayukta statement is a recent occurrence.

Mr.Speaker: It must be one. you have included three.

Sri T.B. Jayachandra: Governor's statement is a recent occurrence.

Mr.Speaker: You convince me, are you ಒಂದೇ ಒಂದು allegation ಮಾಡಿದ್ದರೆ ಸರಿ, ಆದರೆ you have so many. ಲೋಕಾಯುಕ್ತದ್ದು ಹೇಳಿದ್ದಿರಿ, ರಾಜ್ಯಪಾಲರದು ಹೇಳಿದ್ದಿರಿ, ನೀವು ಇಲ್ಲಿ ನೋಡಿ.

ಶ್ರೀ ಸಿದ್ದರಾಮಯ್ಯ: ಅವು ದೂರುಗಳು ಇವೆ ಎಂದು ಹೇಳಿರುವುದು ಸ್ವಾಮಿ, ಅವುಗಳು ಅಲ್ಲ. ಅಲ್ಲಿಯೂ corruption ಬಗ್ಗೆ ದೂರುಗಳು ಹೋಗಿವೆ. ದೂರುಗಳು ಹೋದ ತಕ್ಷಣ ಈ ಸರ್ಕಾರ ರಾಜೀನಾಮೆ ಕೊಡಬೇಕಾಗಿತ್ತು. ಆದರೂ ಕೊಟ್ಟಿಲ್ಲ.

Sri S. Suresh Kumar: It is a list of allegations. List of allegations cannot be become an adjournment motion.

ಅಧ್ಯಕ್ಷರು: ಈ provision ನಲ್ಲಿ ಬರುತ್ತದೆಯೆ?

ಶ್ರೀ ಸಿದ್ದರಾಮಯ್ಯ: ದಯವಿಟ್ಟು ಇಲ್ಲಿ ನೋಡಿ, Corruption is the urgent matter, because this government…

ಅಧ್ಯಕ್ಷರು: You alleged, ಇವರು ಅಧಿಕಾರ ವಹಿಸಿಕೊಂಡಾಗಿನಿಂದ corruption ಎಂದು ಹೇಳುತ್ತಿದ್ದೀರಿ.

Sri Siddaramaiah: This Government has committed certain illegal things.

Mr. Speaker: When?

ಶ್ರೀ ಸಿದ್ದರಾಮಯ್ಯ: from day one… today, yesterday ಕೂಡ.

Mr. Speaker: Whether it is within the perview of this Adjournment Motion?

ಶ್ರೀ ಸಿದ್ದರಾಮಯ್ಯ: ಇಲ್ಲಿಯವರೆಗೂ ನಡೆಯುತ್ತಿದೆ. ಇದು ಇಲ್ಲಿಯವರೆಗೂ ನಡೆಯುತ್ತಿದೆ ಎಂದರೆ urgent matter.

Sri S. Suresh Kumar: List of allegations cannot become an adjournment motion. Specific issue ಎಲ್ಲಿದೆ?

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾನು ಸೆಕ್ಷನ್ 533 ಓದಿದ್ದು. Any commission or omission which is entrusted by the Constitution to this Government, if they fail to do so, that matter can be raised through an Adjournment Motion. When such being the case we have raised, we have mentioned in our notice specifically,

corruption. Corruption includes nepotism also, corruption includes land scandal also, corruption includes misuse of power also.xxx xxx xxx

ಅಧ್ಯಕ್ಷರು: ಇದು ದಾಖಲೆಗೆ ಹೋಗಬಾರದು.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: ನೀವು ಹೋಗಿ ನ್ಯಾಷನಲ್ ಕಾಲೇಜಿನಲ್ಲಿ ಭಾಷಣ ಮಾಡಿ.

ಶ್ರೀ ಸಿದ್ದರಾಮಯ್ಯ: ಹಾಗಾದರೆ corruption ಎಂದರೆ ಏನು? What is it mean? Corruption ಯಾವಾಗ ಆಗಿರಬೇಕು?

ಅಧ್ಯಕ್ಷರು: ಸರಿ, ಅದು Adjournment Motionನಲ್ಲಿ ಬರುತ್ತದಾ?

ಶ್ರೀ ಸಿದ್ದರಾಮಯ್ಯ: ನಿನ್ನೆಯವರೆಗೂ ನಡೆದಿದೆ, ಮೊನ್ನೆಯವರೆಗೂ ನಡೆದಿದೆ. ಇವತ್ತು assembly ಸೇರಿದ್ದೇವೆ. When we should raise? Today is the first opportunity for us to raise.

ಅಧ್ಯಕ್ಷರು: ನಾನು ವಿಷಯ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ.

Sri Siddaramaiah: It is a matter of public importance. It is an urgent matter. Corruption is the specific issue.

ಅಧ್ಯಕ್ಷರು: ತಾವು ಮಾನ್ಯ ರಾಜ್ಯಪಾಲರ ಭಾಷಣದಲ್ಲೂ ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡಬಹುದು.

Sri Siddaramaiah: Corruption is the specific issue. Till today it is going on. It is happenning. It is having the public importance. It is a very urgent matter. What more is required? There is a huge loss to the Karnataka Exchequer...

(ಗೊಂದಲ)

Sri S. Suresh Kumar: Corruption is an issue. ಪ್ರಶ್ನೆ ಇರುವಂಥದ್ದು ಅದಲ್ಲ, ಪ್ರಶ್ನೆ ಇರುವಂಥದ್ದು when there is an opportunity, corruption issue during Governor's address. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ adjournment motion ಆಗುವುದಿಲ್ಲ.

---

xxx ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಸಿದ್ದರಾಮಯ್ಯ: ಇವರಿಗೆ ಚರ್ಚೆ ಮಾಡುವುದಕ್ಕೆ ಉದ್ದೇಶವಿಲ್ಲ.

ಅಧ್ಯಕ್ಷರು: ಚರ್ಚೆ ಮಾಡುವುದಕ್ಕೆ ಬೇರೆ ರೀತಿಯಲ್ಲೂ ಅವಕಾಶ ಮಾಡಬಹುದಲ್ಲಾ...

ಶ್ರೀ ಸಿದ್ದರಾಮಯ್ಯ: ಇಲ್ಲಿ ಮಾನ್ಯ ಮುಖ್ಯಮಂತ್ರಿಯವರು ಕುಳಿತಿದ್ದಾರೆ. ಅವರ ಮೇಲೆ ಆರೋಪಗಳು ಇವೆ.

ಅಧ್ಯಕ್ಷರು: ತಾವು ಬೇರೆ ರೀತಿಯಲ್ಲಿ ಚರ್ಚೆ ಮಾಡಬಹುದಲ್ಲ, Governor address ಮೇಲೂ ಚರ್ಚೆ ಮಾಡಬಹುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಂತ್ರಿಮಂಡಲದ ಮೇಲೆ ಆರೋಪ ಮಾಡಿದ್ದೇವೆ. Corruption is against the Government. It is happening today also. I will call it as specific issue.

ಶ್ರೀ ಎಸ್. ಸುರೇಶ್ ಕುಮಾರ್: ರಾಜಕೀಯ ಭಾಷಣಕ್ಕೆ adjournment motionನಲ್ಲಿ ಅವಕಾಶವಿಲ್ಲ. Specific matter ಇದ್ದರೆ ಹೇಳಲಿ. Let him go to the specific matter.

Sri Siddaramaiah: This is specific issue. They do not want this subject to be discussed. This corruption matter is to be discussed. They do not want. Because 6 crores of people come to know this.

(ಗೊಂದಲ)

ಅಧ್ಯಕ್ಷರು: ತಾವು Governor addressನಲ್ಲಿ ಎಲ್ಲವನ್ನು ಹೇಳಬಹುದಲ್ಲಾ...

Sri Siddaramaiah: I am very sorry. Corruption is having its wide meaning. Our specific issue is corruption.

ಶ್ರೀ ಎಸ್. ಸುರೇಶ್ ಕುಮಾರ್: ಇಲ್ಲಿರುವುದು issue ಅಲ್ಲ. Specific matter ಎಂದು ಇದೆ, What is the matter? What is that incident? ಹೇಳಿ.

(ಗೊಂದಲ)

Mr. Speaker: Specific and definite.

Sri Siddaramaiah: Corruption is also a public issue. What is the difference between the matter and issue?

Mr.Speaker: Definite.

Sri Siddaramaiah: Corruption is a definite matter.

Mr. Speaker: I must rely upon the Motion.

Sri Siddaramaiah: No no, please allow us, we will convince you.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಇದು ಹೊಸ ಸಂಪ್ರದಾಯ ಏನೂ ಅಲ್ಲ, ಇದು ಲೋಕಸಭೆಯಲ್ಲಿ ಆಗಿರುವಂಥದ್ದು, ಚರ್ಚೆಯಾಗಿರುವಂಥದ್ದು.

ಶ್ರೀ ಎಸ್. ಸುರೇಶ್‌ಕುಮಾರ್: ನಾನು ಕೂಡ ಲೋಕಸಭೆಯಲ್ಲಿ ಆಗಿರುವಂಥದ್ದನ್ನೇ ಓದಿರುವಂಥದ್ದು. For the purpose of this rule a matter to be definite, urgent and of public importance must have arisen suddenly in the matter of an emergency and should not have arisen over a series of weeks, months, years ಆಗುವುದಿಲ್ಲ.

Sri T.B. Jayachandra: The questions regarding alleged charges of corruption agains the Chief Minister of a State are therefore admitted and answered in Lok Sabha.

ಶ್ರೀ ಸಿದ್ದರಾಮಯ್ಯ: ಕಳೆದ ಅಸೆಂಬ್ಲಿಯಿಂದ ಈಚೆಗೆ ಏನೇನು ನಡೆದಿದೆ ಅದೆಲ್ಲಾ recent occurrence. That is a recent. Definition ಕೊಡಿ recent ಎಂದರೆ ಏನು ಎಂದು ಹೇಳಿ.

ಅಧ್ಯಕ್ಷರು: ತಾವು petitionನಲ್ಲಿ ಏನು ಹೇಳಿದ್ದೀರಿ, ಅಧಿಕಾರಕ್ಕೆ ಬಂದಾಗಿನಿಂದ ಎಂದು ತಾವೇ ಹೇಳಿ, ಈಗ ತಾವು recent ಎಂದು ಹೇಳಿದರೆ how to admit? ಈಗ you read out the first sentence.

ಶ್ರೀ ಸಿದ್ದರಾಮಯ್ಯ: ಜುಲೈ ತಿಂಗಳಲ್ಲಿ ಅಸೆಂಬ್ಲಿ ನಡೆದಿದ್ದು, ಈಗ ಚರ್ಚೆ ಮಾಡಬೇಕೆ, ಬೇಡವೇ, ಎಂದು ಹೇಳಿ.

ಅಧ್ಯಕ್ಷರು: ಈ provision ನಲ್ಲೇ ಚರ್ಚೆ ಮಾಡಬೇಕೆಂದು ಇಲ್ಲ. ಯಾವ ರೀತಿಯಲ್ಲಾದರೂ ಮಾಡಬಹುದು. ಇದು adjournment motionನಲ್ಲಿ ಬರಬೇಕಾದರೆ there are certain conditions. ಆ conditions ಅನ್ನು if you are able to fulfill....

Sri Siddaramaiah: This is a very big effort...

ಅಧ್ಯಕ್ಷರು: ಇದು public importance ಇದನ್ನು ಚರ್ಚೆ ಮಾಡಬಾರದೆಂದು ನಾನು ಹೇಳುತ್ತಿಲ್ಲ.

(ಗೊಂದಲ)

Sri Siddaramaiah: On the floor of the House through an adjournment motion.

ಅಧ್ಯಕ್ಷರು: ಈಗ ತಾವು ಯಾವ corruption ಎಂದು specific ಆಗಿ ಹೇಳಬೇಕಲ್ಲಾ... ತಾವು ಏನು ಹೇಳಿದ್ದೀರೆಂದರೆ, ಮಾನ್ಯ ಯಡಿಯೂರಪ್ಪ ನೇತೃತ್ವದ ಬಿ.ಜೆ.ಪಿ. ಸರ್ಕಾರವು ಅಧಿಕಾರ ವಹಿಸಿಕೊಂಡ ದಿನದಿಂದ...

Sri Siddaramaiah: Corruption is a specific issue. ಈ ಸರ್ಕಾರದ ಭೂ ಹಗರಣಗಳು, ಸ್ವಜನ ಪಕ್ಷಪಾತ ಹೇಗೆ ಆಗಿದೆ ಎಂಬ ಬಗ್ಗೆ ನಾವು convince ಮಾಡುತ್ತೇವೆ. There is corruption.

ಅಧ್ಯಕ್ಷರು: ಅದನ್ನು ಬೇರೆ ರೀತಿಯಲ್ಲಿಚರ್ಚೆ ಮಾಡುವುದಕ್ಕೆ ಅವಕಾಶಗಳು ಧಾರಾಳವಾಗಿ ಇವೆ.

ಶ್ರೀ ಸಿದ್ದರಾಮಯ್ಯ: I am very sorry. ಈ ರೀತಿ ಆದರೆ ನಾವು ಇಲ್ಲಿ ಏನೂ ಮಾತನಾಡುವುದಕ್ಕೆ ಆಗುವುದಿಲ್ಲ. ಸರ್ಕಾರ ಭ್ರಷ್ಟಾಚಾರ ಮಾಡುತ್ತಿದ್ದರೆ ಇಲ್ಲಿ ನಾವು ಸುಮ್ಮನೆ ಕುಳಿತಿರುವುದಕ್ಕೆ ಆಗುತ್ತದೆಯೇ?

ಅಧ್ಯಕ್ಷರು: ನೀವು ಮಾತನಾಡಿ, ಯಾರು ಬೇಡವೆಂದು ಹೇಳಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಸಿದ್ದರಾಮಯ್ಯನವರೆ, ಒಂದು ನಿಮಿಷ.

ಶ್ರೀ ಸಿದ್ದರಾಮಯ್ಯ: ಭ್ರಷ್ಟಾಚಾರ, ಲೂಟಿ ಮಾಡುತ್ತಿದ್ದರೆ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ?

ಅಧ್ಯಕ್ಷರು: ಖಂಡಿತಾ ಇಲ್ಲ, It is your responsibility, ಅವಕಾಶವನ್ನು under what provision ಎಂದು you must convince.

Sri Siddaramaiah: We have explained, I hope that you are convinced.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಸಭಾಧ್ಯಕ್ಷರೆ, ನನ್ನ ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. No motion which seeks to raise discussion on a matter pending before any statutory tribunal, any statutory authority performing any judicial or quasi judicial functions

or any commission of enquiry. ಇವತ್ತು ಲೋಕಾಯುಕ್ತರ ಬಗ್ಗೆ refer ಮಾಡಿದ್ದೀರಿ, ಮಾನ್ಯ ರಾಜ್ಯಪಾಲರ ಬಗ್ಗೆ refer ಮಾಡಿದ್ದೀರಿ. ಈಗಾಗಲೇ judicial enquiryಯನ್ನು ಮಾಡಿದ್ದೇವೆ. ಈ ರೀತಿ ಇರುವಾಗ ಆ ಒಂದು ವಿಚಾರ adjournment motion ಮುಖಾಂತರ ಏಕೆ ಬರುತ್ತದೆ?

ಶ್ರೀ ಸಿದ್ದರಾಮಯ್ಯ: ನಾವು ಲೋಕಾಯುಕ್ತರಿಗೆ complaint ಕೊಟ್ಟಿರುವಾಗ ನೀವು judicial commission ಅನ್ನು ಏಕೆ appoint ಮಾಡುವುದಕ್ಕೆ ಹೋದಿರಿ?

ಶ್ರೀ ಎಸ್. ಸುರೇಶ್‌ಕುಮಾರ್: ನಾವು Judicial enquiry ಮಾಡಿದ್ದೇವೆ.

Sri Siddaramaiah: When the complaint is lodged before the Lokayuktha ಇವರು ಲೋಕಾಯುಕ್ತರವರು ರಾಜೀನಾಮೆಯನ್ನು ಕೊಟ್ಟಾಗ...

ಅಧ್ಯಕ್ಷರು: ಅದನ್ನು ಇಲ್ಲಿ ಚರ್ಚೆ ಮಾಡುವುದು ಬೇಡ.

ಶ್ರೀ ಎಸ್. ಸುರೇಶ್‌ಕುಮಾರ್: ಪ್ರಚಾರ ಭಾಷಣ.

ಶ್ರೀ ಸಿದ್ದರಾಮಯ್ಯ: ಸಿಬಿಐನಿಂದ ಆಗಕೂಡದು, ಇದು ಲೋಕಾಯುಕ್ತದಿಂದಲೇ ತನಿಖೆ ಆಗಬೇಕೆಂದು ಇವರೇ ಹೇಳಿದವರು, ಲೋಕಾಯುಕ್ತದವರು ರಾಜೀನಾಮೆ ಕೊಟ್ಟಿರುವುದನ್ನು ಇವರೇ ತೆಗೆಸಿ, ನಮಗೆ ಇವರ ಮೇಲೆ ಅಪಾರ ನಂಬಿಕೆ ಇದೆ, ವಿಶ್ವಾಸವಿದೆ, ಅವರಿಂದ ನ್ಯಾಯ ಸಿಗುತ್ತದೆಂದು ಹೇಳಿದವರು, Judicial Commission ಅನ್ನು ಏಕೆ ಮಾಡಿದರು?... What is their intention, is there any bonafide intention?

Mr. Speaker: Now the matter is before the Hon'ble High Court.

ಶ್ರೀ ಸಿದ್ದರಾಮಯ್ಯ: Judicial Commission ಮಾಡಿರುವುದೇ ತಪ್ಪು.

Mr. Speaker: Let the Court decide.

ಶ್ರೀ ಸಿದ್ದರಾಮಯ್ಯ: ನಮ್ಮ ಸರ್ಕಾರ ಕಾನೂನಿನಲ್ಲಿ ಮಾಡಿಕೊಂಡಿರುವಂಥ ಲೋಕಾಯುಕ್ತರ ಬಗ್ಗೆ ಒಂದು ಸಾರಿ ನಂಬಿಕೆ ಇದೆ ಎಂದು, ಇನ್ನೊಂದು ಸಾರಿ ನಂಬಿಕೆ ಇಲ್ಲವೆಂದು ಹೇಳುತ್ತಾರೆ. ಅದಕ್ಕೋಸ್ಕರ ಇನ್ನೊಬ್ಬರಿಗೆ ಕೊಡುತ್ತೇವೆಂದು ಹೇಳುತ್ತಾರೆ. ಇವರು ಏನು ಮಾಡುತ್ತಾರೆಂದರೆ 18ನೇ ತಾರೀಖಿನವರೆಗೂ ಲೋಕಾಯುಕ್ತದವರು ಮಾಡಬಹುದೆಂದು ಮಾಡುತ್ತಾರೆ. 18ನೇ ತಾರೀಖಿನಂದು ಲೋಕಾಯುಕ್ತಕ್ಕೆ complaint lodge ಆಗುತ್ತದೆ. ಆಮೇಲೆ 18ನೇ ತಾರೀಖಿನಿಂದ ಮಾಡಕೂಡದೆಂದು ಹೇಳುತ್ತಾರೆ.

Mr. Speaker: Any have now the matter is before the Hon'ble High Court.

ಶ್ರೀ ಸಿದ್ದರಾಮಯ್ಯ: ಯಾವ ನ್ಯಾಯ ಇದು. Is there any bonafide intention?

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ನಮ್ಮ ದೇಶದಲ್ಲಿ Commission of Enquiry Act ಎಂದು ಒಂದು ಇದೆ. ಆ Act ಅಡಿಯಲ್ಲಿ ನಾವು ಒಂದು Commission ಅನ್ನು ನೇಮಕ ಮಾಡಿದ್ದೇವೆ. ಇಲ್ಲಿ ಅವರು ಈ ರೀತಿ ಎಲ್ಲಾ ಮಾತನಾಡುವುದು, ನಂಬಿಕೆ ಇಲ್ಲವೆಂದು ಹೇಳುವಂಥದ್ದು ರಾಜಕೀಯವೆಂದು ಅನಿಸುತ್ತದೆ.

Sri Siddaramaiah: It is a device to escape from the responsibility.

Sri S. Suresh Kumar: It is a political device on your part.

Sri Siddaramaiah: It is your device to escape from the responsibility. This government is answerable to this House not some where else. It is the basic responsibility of an elected government in the democracy.

Mr. Speaker: That has been a challenge before Hon'ble High Court. ಆ ವಿಷಯ High Court ಮುಂದೆ ಇದೆ. Let the Court decide.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾವು High Court ಮುಂದಿರುವ ವಿಚಾರವನ್ನು ಪ್ರಸ್ತಾಪ ಮಾಡುತ್ತಿಲ್ಲ.

ಅಧ್ಯಕ್ಷರು: ಈಗ judicial enquiryಗೆ ಕೊಟ್ಟಿರುವುದು ತಪ್ಪು ಎಂದು ಹೇಳುವಂಥದ್ದು...

Sri S. Suresh Kumar: We have made our point very clear, this is not a recent occurrence.

Sri Siddaramaiah: We have made it very clear, this is admissible, please allow me to speak.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್: ಇದು judicial enquiry ಮುಂದೆ ಇದೆ. ಇದು ಯಾವುದೇ ಕಾರಣಕ್ಕೂ adjournment motionನಲ್ಲಿ ತರುವುದಕ್ಕೆ ಆಗುವುದಿಲ್ಲ.

Mr. Speaker: I will give ruling.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, preliminary submission ಮಾಡಿದ ಮೇಲೆ ತಾವು ಏನಾದರೂ decision ತೆಗೆದುಕೊಳ್ಳಿ. ಅವರು point of order ಇದ್ದು...

ಅಧ್ಯಕ್ಷರು: ಈಗ point of order ಮೇಲೆ ತಾವು almost all preliminary everything has been submitted.

ಶ್ರೀ ಸಿದ್ದರಾಮಯ್ಯ: ಅದರ ಮೇಲೆ orders ಕೊಡಬೇಕಾದಂತಹ ಅಗತ್ಯವಿಲ್ಲ. ಬಹಳ sufficient ಆಗಿ clear ಆಗಿ ಹೇಳಿದ್ದೇವೆ.

ಅಧ್ಯಕ್ಷರು: ತಾವು ಏನೇನು ಹೇಳಬೇಕೋ ಎಲ್ಲವನ್ನೂ ಹೇಳಿದ್ದೀರಿ. Is there any addition?

ಶ್ರೀ ಸಿದ್ದರಾಮಯ್ಯ: ತಾವು ಅವರು ಹೇಳಿರುವುದೇ ಸರಿ ಎಂದು ಹೇಳುವುದಾದರೆ How to function ಎಂದು ಹೇಳಿ.

ಅಧ್ಯಕ್ಷರು: ನಾವು ಅವರು ಹೇಳಿದ್ದೇ ಸರಿ ಎಂದು ಹೇಳಿದ್ದೇನಾ? I wil apply my judicial mind on the basis of this rule. ನೀವು ಕೊಟ್ಟಿರುವುದನ್ನು, ಅವರು ಹೇಳಿರುವುದನ್ನು ಕೇಳಿ I will apply my mind and I will give my ruling. ಈಗ ನೀವು ಹೇಳಿದ ಹಾಗೆ ಮಾಡಬೇಕು, ಅವರು ಹೇಳಿದ ಹಾಗೆ ಮಾಡಬೇಕೆಂದು ಅಲ್ಲ. What is enumerated in this rule, I will do it.

ಶ್ರೀ ಎಸ್. ಸುರೇಶ್‌ಕುಮಾರ್: Unfortunately ಅವರು ತಂದಿರುವ ವಿಷಯ ರೂಲ್ 60ರಲ್ಲೂ ಬರುವುದಿಲ್ಲ, ರೂಲ್ 69ರಲ್ಲೂ ಬರುವುದಿಲ್ಲ.

Sri Siddaramaiah: I will once again submit... ನಾವು rule ಪ್ರಕಾರವೇ ಆಗಬೇಕೆಂದು ಹೇಳುತ್ತಿದ್ದೇವೆ.

ಅಧ್ಯಕ್ಷರು: ನಾನು ರೂಲ್ ಪ್ರಕಾರವೇ ಹೇಳುತ್ತಿದ್ದೇನೆ, ರೂಲ್ ಬಿಟ್ಟು ಮಾಡುವುದಿಲ್ಲ.

ಶ್ರೀ ಸಿದ್ದರಾಮಯ್ಯ: ರೂಲ್ ಪ್ರಕಾವೇ ಆಗಬೇಕು. Not more than that.

12.40 ಪಿಎಂ

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ನಾವು ಅಸೆಂಬ್ಲಿ ರೂಲ್ ಅನ್ನು ಕೇಳುತ್ತಿರುವುದು, ಕಾಂಗ್ರೆಸ್ ರೂಲ್ ಅಲ್ಲ, ಕಾಂಗ್ರೆಸ್ ರೂಲ್ ಪ್ರಕಾರ ಆಗಬೇಕೆನ್ನುವುದಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಇವರು ಬಿ.ಜೆ.ಪಿ. ರೂಲ್ ಹೇಳುವುದು. ಇಲ್ಲಿ ಮಾತನಾಡುವಾಗ ಎಲ್ಲರೂ ಒಂದೇ ಸಾರಿ ಎದ್ದು ನಿಲ್ಲುವುದು. ಇದು ಬಹಳ ಉದ್ಧಟತನವಾಯಿತು. ಇದಕ್ಕೆ ಬಿ.ಜೆ.ಪಿ. ರೂಲ್ ಅನ್ನದೇ ಇನ್ನೇನು ಹೇಳಬೇಕು?

ಶ್ರೀ ಎಸ್. ಸುರೇಶ್‌ಕುಮಾರ್: ಇಲ್ಲಿ ನಿಲ್ಲುವುದು ಬಿ.ಜೆ.ಪಿ. ರೂಲ್ ಆದರೆ ಸ್ಪೀಕರ್ ಸ್ಥಾನದಲ್ಲಿ ಮೈಕ್ ಕಿತ್ತು ಹಾಕುವಂಥದ್ದು ಕಾಂಗ್ರೆಸ್ ರೂಲಾ...

ಶ್ರೀ ಸಿದ್ದರಾಮಯ್ಯ: ಯಾವುದು ರೂಲ್ ಅಲ್ಲ. ನೀವು ಮಾಡಿರುವುದನ್ನೇ ನಾನು ಮಾಡುವುದು. ನೀವು ಏನೇನು ಮಾಡಿದ್ದೀರಾ, ಅದನ್ನೇ ನಾವು ಮಾಡುವುದು. ನೀವು ಹೇಳಿದ ಹಾಗೆ ಮಾಡಬೇಕೆಂದು ಏನೂ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಇದರಲ್ಲಿ Point of Order ಬರುವುದೇ ಇಲ್ಲ.

Sri Siddaramaiah: There is no Point of Order. Then, where is the question of giving ruling?

ಶ್ರೀ ಎಸ್. ಸುರೇಶ್‌ಕುಮಾರ್: ಇದರಲ್ಲಿ point of disorder ಬರುವುದು.

Sri T.B. Jayachandra: Point of Order itself relates to interpretation or enforcement of Rules. ಅದರಲ್ಲಿ ಯಾವುದು enforcement ಇಲ್ಲ, interpretation ಇಲ್ಲ. ತಾವು ದಯಮಾಡಿ, Point of Order raise ಮಾಡಿರುವುದನ್ನು ತಳ್ಳಿ ಹಾಕಿ, ನಮಗೆ submission ಮಾಡುವುದಕ್ಕೆ ಅವಕಾಶ ಕೊಡಬೇಕು. ಲೋಕಸಭೆಯಲ್ಲಿ ನಡೆದಿರತಕ್ಕಂಥ ಕಾರ್ಯಕಲಾಪಗಳ proceedings ಏನಿದೆ ಎನ್ನುವುದನ್ನು ನಾವು quote ಮಾಡಿದ್ದೇವೆ. ದಯಮಾಡಿ ಅದನ್ನು ಗಮನದಲ್ಲಿಟ್ಟುಕೊಂಡು, Point of Order raise ಮಾಡಿರುವುದನ್ನು ತಳ್ಳಿ ಹಾಕಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಹಗರಣಗಳು ಪ್ರತಿನಿತ್ಯ ನಡೆಯುತ್ತಿವೆ, ದಿನವೂ ರಾತ್ರಿ-ಹಗಲು ನಡೆಯುತ್ತಿವೆ. ಬಿ.ಡಿ.ಎ. ಸ್ವಾಧೀನದಲ್ಲಿರುವ ಜಮೀನನ್ನು ಡೀ-ನೋಟಿಫೈ ಮಾಡಿರುವುದು urgent matter ಅಲ್ಲವೇ? It is not a loss to the

B.D.A? ಅನರ್ಹರಿಗೆ ಸೈಟ್ ಕೊಟ್ಟರೆ, is it not a loss to the B.D.A? ಅದನ್ನು ಮಾರಿಕೊಂಡು ದುಡ್ಡು ಮಾಡಿಕೊಂಡರೆ, is it not a loss to the B.D.A? Is it not recent occurrence? Land scam is recent occurrence, de notification is recent occurrence.

Mr. Speaker: This is not alleged in your notice.

Sri Siddaramaiah: That question does not arise at all. ಈ ಸರ್ಕಾರದಿಂದ ಈ ರೀತಿ ಸಾವಿರಾರು ಕೋಟಿ ರೂಪಾಯಿ ಲೂಟಿಯಾಗುತ್ತಿದೆ. seniority ಮೇಲೆ ಕೊಡುವುದಿಲ್ಲ.

(ಗೊಂದಲ)

Mr. Speaker: I will give ruling.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಈ ರೀತಿಯಾದರೆ ಸಭೆ ನಡೆಯುವುದಿಲ್ಲ. ಹುಡುಗಾಟವಾಗಿ ಹೋಯಿತು.

(ಗೊಂದಲ)

(ಈ ಹಂತದಲ್ಲಿ ವಿರೋಧ ಪಕ್ಷಗಳ ಸದಸ್ಯರು ಧರಣಿಗಾಗಿ ಸದನದ ಬಾವಿಗೆ ಬಂದರು)

(ಗೊಂದಲ)

2. ಅಧ್ಯಕ್ಷರ ತೀರ್ಪು

ವಿಷಯ: ಭ್ರಷ್ಟಾಚಾರದಂತಹ ವಿಷಯಗಳು ನಿಲುವಳಿ ಸೂಚನೆಯ ವ್ಯಾಪ್ತಿಗೆ ಬರುವುದಿಲ್ಲ ಎನ್ನುವ ಬಗ್ಗೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರರು ನೀಡಿರುವ ನಿಲುವಳಿ ಸೂಚನೆಯನ್ನು ಪ್ರಸ್ತಾಪಿಸುವ ವಿಷಯದ ಕುರಿತು ಈಗಾಗಲೇ ಪೂರ್ವಭಾವಿಯಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಉಪ ನಾಯಕರಾದ ಶ್ರೀ ಟಿ.ಬಿ. ಜಯಚಂದ್ರರವರು ಮತ್ತು ಜಾತ್ಯಾತೀತ ಜನತಾದಳದ ನಾಯಕರಾದ ಶ್ರೀ ಹೆಚ್.ಡಿ. ರೇವಣ್ಣನವರು ಪ್ರಸ್ತಾಪಿಸಿದ್ದಾರೆ. ಆದರೆ ಈಗಾಗಲೇ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಈ ವಿಷಯವೂ ನಿಲುವಳಿ ಸೂಚನೆಯ ವ್ಯಾಪ್ತಿಗೆ ಬರುವುದಿಲ್ಲವೆಂದು ಮಂಡಿಸಿರುತ್ತಾರೆ. ಈ ದಿಸೆಯಲ್ಲಿ ಮಾನ್ಯರುಗಳು ನೀಡಿರುವ ನಿಲುವಳಿ ಸೂಚನೆಗಳನ್ನು ಪರಿಶೀಲಿಸಿದ್ದೇನೆ. ಯಡಿಯೂರಪ್ಪ ನೇತೃತ್ವದ